

ಬೆಳ್ಳಿಮೋಡ: ಕಲ್ಪನಾ, ಕಲ್ಯಾಣಕುಮಾರ್

ತರಬೇತಾಗಿದ್ದ ಮೋಹನ್ ಭವನಾನಿ ಛಾಯಾಗ್ರಾಹಕರು. ಕೈಲಾಸಂ, ಕಥೆಗಾರ ಆನಂದ, ಮುಂಬೈ ಕಲಾವಿದೆ ನಳಿನಿ ಪರ್ಕಾಡ್, ಪತ್ರಕರ್ತ ಬಿ.ಎಸ್.ರಾಮರಾವ್ ಹಾಗೂ ಎಂ.ವಿ.ರಾಜಮ್ಮ ತಾರಾಗಣದಲ್ಲಿದ್ದ ಪ್ರಮುಖರು. ನಾಟಕ ಕಂಪನಿ ಮೂಲಕ ಹೆಸರು ಮಾಡಿದ್ದ ಗುಬ್ಬಿ ವೀರಣ್ಣನವರು 'ಹರಿಮಾಯ' ಹಾಗೂ 'ಹಿಸ್ ಲವ್ ಅಫೇರ್' ಎನ್ನುವ ಚಿತ್ರಗಳನ್ನು ನಿರ್ಮಿಸಿದ್ದರು. ಮೂಕಿ ಚಿತ್ರಗಳಲ್ಲಿ ಕೈ ಸುಟ್ಟುಕೊಂಡಿದ್ದ ವೀರಣ್ಣನವರು, ಟಾಕಿ ಚಿತ್ರಗಳ ಯಶಸ್ಸಿನಿಂದ ಉತ್ತೇಜಿತರಾಗಿ 1935ರಲ್ಲಿ 'ಸದಾರಮೆ' ನಿರ್ಮಿಸಿದರು.

1936ರಲ್ಲಿ ಬಿಡುಗಡೆಯಾದ 'ಸಂಸಾರ ನೌಕೆ' ಕನ್ನಡ ಚಿತ್ರರಂಗದ ಮತ್ತೊಂದು ಮೈಲಿಗಲ್ಲು. ಎಚ್.ಎಲ್.ಎನ್. ಸಿಂಹ ನಿರ್ದೇಶನದ ಈ ಸಿನಿಮಾ ದಕ್ಷಿಣ ಭಾರತದಲ್ಲೇ ಮೊದಲ ಸಾಮಾಜಿಕ ಕಥನದ ಸಿನಿಮಾ.

ವಿಶ್ವ ಮಹಾಯುದ್ಧ ಹಾಗೂ ಬ್ರಿಟಿಷ್ ಆಳ್ವಿಕೆಯಲ್ಲಿನ ನಿರ್ಬಂಧಗಳಿಂದಾಗಿ 1938—40ರ ಅವಧಿಯಲ್ಲಿ ಕನ್ನಡ ಚಿತ್ರೋದ್ಯಮ ಸ್ಥಗಿತಗೊಳ್ಳುವ ಸ್ಥಿತಿ ತಲುಪಿದಾಗ, ಮತ್ತೆ ನಿರ್ಮಾಣದ ಸಾಹಸ ಮಾಡಿದ್ದು ಗುಬ್ಬಿ ವೀರಣ್ಣನವರೇ, – 'ಸುಭದ್ರ' (1945) ಸಿನಿಮಾದ ಮೂಲಕ. ಅದೇ ವರ್ಷ ನಾಗೇಂದ್ರರಾವ್ ಮತ್ತು ಸುಬ್ಬಯ್ಯ ನಾಯ್ಡು ಗೆಳೆಯರು 'ವಸಂತಸೇನಾ' ರೂಪಿಸಿದರು. ಆವರೆಗೆ ಚಿತ್ರೀಕರಣ ಸಂದರ್ಭದಲ್ಲೇ ಗೀತೆಗಳ ಧ್ವನಿಮುದ್ರಣ ನಡೆಯುತ್ತಿತ್ತು. ಶೂಟಿಂಗ್‌ಗೆ ಮೊದಲೇ ಹಾಡುಗಳನ್ನು ಧ್ವನಿಮುದ್ರಿಸುವ ಸಂಪ್ರದಾಯಕ್ಕೆ 'ವಸಂತಸೇನಾ' ಚಾಲನೆ ನೀಡಿತು.



ಭಾರತಿ

1954 ಕನ್ನಡ ಚಿತ್ರರಂಗದ ಪಾಲಿಗೆ ಸ್ಮರಣೀಯ ವರ್ಷ. ರಾಜ್‌ಕುಮಾರ್ ನಾಯಕರಾಗಿ ನಟಿಸಿದ ಚೊಚ್ಚಲ ಸಿನಿಮಾ 'ಬೇಡರ ಕಣ್ಣಪ್ಪ' ತೆರೆ ಕಂಡಿದ್ದು ಇದೇ ವರ್ಷ. ನಂತರದ ಸುಮಾರು ಐದು ದಶಕಗಳ ಕಾಲ ರಾಜ್‌ಕುಮಾರ್ ಕನ್ನಡ ಚಿತ್ರರಂಗದ ಅಸ್ಮಿತೆಯಾಗಿ ಪರಿಣಮಿಸಿದ್ದು ಸಿನಿಮಾ ಚರಿತ್ರೆಯ ಬಹುಮುಖ್ಯವಾದ ಸಂಗತಿ. ಹಾಸ್ಯನಟ ನರಸಿಂಹರಾಜು ಅವರಿಗೂ ಇದು ಮೊದಲ ಚಿತ್ರ. ನೂರು ದಿನಗಳ ಯಶಸ್ವಿ ಪ್ರದರ್ಶನ ಕಂಡದ್ದು ಕಣ್ಣಪ್ಪ ಚಿತ್ರದ ಮತ್ತೊಂದು ವಿಶೇಷ. ಕನ್ನಡದ ಮತ್ತೊಬ್ಬ ಜನಪ್ರಿಯ ನಟ ಕಲ್ಯಾಣಕುಮಾರ್ 'ನಟಶೇಖರ' ಮೂಲಕ ಚಿತ್ರರಂಗ ಪ್ರವೇಶಿಸಿದ್ದು ಕೂಡ 1954ರಲ್ಲೇ. 1956ರಲ್ಲಿ ಉದಯಕುಮಾರ್ ನಟನೆಯ 'ಭಾಗ್ಯೋದಯ' ತೆರೆ ಕಾಣುವುದರೊಂದಿಗೆ, ಕನ್ನಡ ಚಿತ್ರರಂಗದ 'ಕುಮಾರತ್ರಯ'ರ ಪಟ್ಟಿ ರೂಪುಗೊಂಡಿತು.

'ಮಹಾತ್ಮ ಚಿತ್ರಸಂಸ್ಥೆ' ಕನ್ನಡ ಚಿತ್ರರಂಗದ ಬೆಳವಣಿಗೆಯಲ್ಲಿ ಎದ್ದುಕಾಣುವ ನಿರ್ಮಾಣ ಸಂಸ್ಥೆಗಳಲ್ಲೊಂದು. ಶಂಕರ್ ಸಿಂಗ್, ಬಿ. ವಿಠಲಾಚಾರ್, ವಿಶ್ವನಾಥ ಶೆಟ್ಟಿ ಅವರು 1947ರಲ್ಲಿ ಆರಂಭಿಸಿದ ಈ ಸಂಸ್ಥೆಯ ಚೊಚ್ಚಲ ಸಿನಿಮಾ 'ಶ್ರೀಕೃಷ್ಣ ಲೀಲಾ'. 'ನಾಗಕನ್ನಿಕಾ', 'ಜಗನ್ಮೋಹಿನಿ', 'ಶ್ರೀನಿವಾಸ ಕಲ್ಯಾಣ' ಈ ಸಂಸ್ಥೆಯ ಕೆಲವು ಜನಪ್ರಿಯ ಸಿನಿಮಾಗಳು. ಈ ಸಂಸ್ಥೆಯ ಶಂಕರ್‌ಸಿಂಗ್ ಅವರ ಪುತ್ರ ಎಸ್.ವಿ. ರಾಜೇಂದ್ರಸಿಂಗ್ ಬಾಬು ಕನ್ನಡದ ಜನಪ್ರಿಯ ನಿರ್ದೇಶಕರಲ್ಲೊಬ್ಬರು.

## ಸಮೃದ್ಧಿಯ ನಡುವೆ ಗುಣಮಟ್ಟದ ಆತಂಕ

2017ರ ಸಾಲಿನ ರಾಷ್ಟ್ರಪ್ರಶಸ್ತಿಗಳ ಸಾಲಿನಲ್ಲಿ ಕನ್ನಡ ಚಿತ್ರರಂಗದ್ದು ನಿರಾಶಾದಾಯಕ ಸಾಧನೆ. 'ಮಾರ್ಚ್ 22' ಚಿತ್ರದ ಗೀತರಚನೆಗಾಗಿ ಜೆ.ಎಂ. ಪ್ರಹ್ಲಾದ್ ಅವರಿಗೆ ಅತ್ಯುತ್ತಮ ಗೀತರಚನೆಕಾರ ಪ್ರಶಸ್ತಿ ದೊರೆತಿರುವುದನ್ನು ಬಿಟ್ಟರೆ ಉಳಿದಂತೆ ಸಂತೋಷಿಸಲು ಕಾರಣಗಳಿಲ್ಲ. ಜ್ಯೂರಿಯೊಬ್ಬರು ಹೇಳುವಂತೆ, ಈ ಬಾರಿ ಪ್ರಾದೇಶಿಕ ವಿಭಾಗದಲ್ಲಿ ಪ್ರಶಸ್ತಿ ನೀಡಲು ಸಶಕ್ತ ಕನ್ನಡ ಸಿನಿಮಾಗಳೇ ಇರಲಿಲ್ಲ. ಹಾಗಾಗಿ, ಯಾವುದೇ ಕನ್ನಡ ಚಿತ್ರಕ್ಕೆ ಪ್ರಶಸ್ತಿ ನೀಡದಿರುವ ಕುರಿತು ಚರ್ಚೆಯೂ ನಡೆಯಿತಂತೆ. ಕೊನೆಗೆ ಅಳೆದೂ ತೂಗಿ 'ಹೆಬ್ಬೆಟ್ ರಾಮಕ್ಕ' ಚಿತ್ರಕ್ಕೆ ಪ್ರಶಸ್ತಿ ನೀಡಲಾಯಿತು ಎನ್ನುವ ಮಾತಿದೆ. ಇದು ಕನ್ನಡ ಚಿತ್ರರಂಗದ ಗುಣಮಟ್ಟದ ಬಗ್ಗೆ ಆತಂಕ ಮೂಡಿಸುವಂತಿದೆ.